

# ಬರದ ನಾಡಿನ ಪಾಠಗಳು

## ನಮೀಬಿಯಾದಲ್ಲಿ ಬರದ ದವಡೆಗೆ ಪ್ರಾಣಿಗಳೇ ತುತ್ತು!

ಆಫ್ರಿಕಾ ಖಂಡದ ನಮೀಬಿಯಾ ಹಲವು ಬರಗಾಲಗಳನ್ನು ಮೆಟ್ಟಿನಿಂತಿರುವ ಪ್ರದೇಶ. ಆದರೆ ಈ ಬಾರಿಯ ಭೀಕರ ಬರಗಾಲ ಜನರ ತ್ರಾಣವನ್ನೇ ಕಸಿದುಕೊಂಡಿದೆ. ಕಾಡುಪ್ರಾಣಿಗಳನ್ನೇ ಕೊಂದು ತಿನ್ನುವಂಥ ಪರಿಸ್ಥಿತಿ ಎದುರಾಗಿದೆ. ನಮೀಬಿಯಾದ ಬರದ ಚಿತ್ರಣ ಮನುಕುಲಕ್ಕೆ ಹಲವು ಪಾಠಗಳನ್ನು ಹೇಳುವಂತಿದೆ.

■ **ಅಕ್ಷತಾ ಕುಡ್ಲೋಳಿ**

ರಾಜಕೀಯ, ಕ್ರಿಕೆಟ್, ಕ್ರೈಂ... ಒಂದಷ್ಟು ನಿತ್ಯ ಸುದ್ದಿಗಳ ನಿರೀಕ್ಷೆಯಲ್ಲಿ ಬೆಳಿಗ್ಗೆ ನ್ಯೂಸ್ ಪೇಪರ್ ತೆರೆದವಳಿಗೆ, ಈ ಸುದ್ದಿ ಕಂಡು ಮನಸ್ಸು ತಲ್ಲಣಿಸಿ ಹೋಯಿತು.

ಆಫ್ರಿಕಾದ ನಮೀಬಿಯಾದಲ್ಲಿ ಎದುರಾಗಿರುವ ಘೋರ–ಭೀಕರ ಬರಗಾಲಕ್ಕೆ ಸಂಬಂಧಿಸಿದ ಪುಟ್ಟ ಸುದ್ದಿಯದು.

ನಮೀಬಿಯಾಗೆ ಬರ ಹೊಸ ಸಂಗತಿಯೇನಲ್ಲ. ಪದೇ ಪದೇ ಎದುರಾಗುತ್ತಿದ್ದ ಬರವನ್ನು ಧೈರ್ಯದಿಂದಲೇ ಮೆಟ್ಟಿನಿಂತು ಮತ್ತೆ ಮತ್ತೆ ಜೀವನ ಕಟ್ಟಿಕೊಂಡ ಗಟ್ಟಿ ನೆಲ ನಮೀಬಿಯಾದ್ದು. ಆದರೆ ಈ ಬಾರಿ ನಮೀಬಿಯಾ ತತ್ತರಿಸುತ್ತಿರುವ ಪರಿ, ಅಲ್ಲಿನ ಸರ್ಕಾರ ತೆಗೆದುಕೊಂಡಿರುವ ಕ್ರಮ ಎಂಥವರನ್ನೂ ಒಮ್ಮೆ ಆಲೋಚಿಸುವಂತೆ ತಡೆದು ನಿಲ್ಲಿಸುವಂಥದ್ದು.

ವನ್ಯಜೀವಿಗಳಿಗೆ, ಭೂದೃಶ್ಯಗಳಿಗೆ ಹೆಸರಾಗಿರುವ ನಮೀಬಿಯಾ ಕಳೆದ ನೂರು ವರ್ಷಗಳಲ್ಲೇ ಇಂಥದ್ದೊಂದು ಭೀಕರ ಬರಗಾಲಕ್ಕೆ ಸಾಕ್ಷಿಯಾಗಿದೆ. ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಒಂದೊಂದೇ ಹೆಜ್ಜೆ ಇಟ್ಟು ಬಂದ ಬರ ಈಗ ಬೃಹದಾಕಾರ ತಳೆದು ನಿಂತಿದೆ. ಎಲ್ಲೆಲ್ಲೂ ಬಿರುಕು ಬಿಟ್ಟ ಭೂಮಿ. ಮೈ ಕುಸಿಯುವಂಥ ಶಾಖ, ತಾಪಮಾನ. ಗಿಡಮರಗಳ ತಂಗಾಳಿಯಿಲ್ಲ, ಹನಿ ನೀರಿಗೂ ಪರದಾಡುವ ಸ್ಥಿತಿ. ತುತ್ತು ಅನ್ನವೂ ಸಿಕ್ಕದೇ ಸರ್ಕಾರದತ್ತ ಕೈಚಾಚಿದ್ದಾರೆ ಲಕ್ಷಾಂತರ ಜನ.

ದೇಶದ ಉಗ್ರಾಣದಲ್ಲಿದ್ದ ಆಹಾರ ಧಾನ್ಯಗಳು ಶೇ 85ರಷ್ಟು ಬರಿದಾಗಿದ್ದು, ದಿಕ್ಕೇ ತೋಚದೆ ಕುಳಿತ ಸರ್ಕಾರ, ಜನರ ಹಸಿವು ತಣಿಸುವ ಸಲುವಾಗಿ ಈಚೆಗೆ ಹೊರಡಿಸಿದ ಆದೇಶವೊಂದು ಅಪಾಯಕಾರಿ ಭವಿಷ್ಯದ ಮುನ್ಸೂಚನೆಯಂತೆಯೂ ಕಾಣುತ್ತಿದೆ.

### ಕಾಡುಪ್ರಾಣಿಗಳ ಮೇಲೆ ಕಣ್ಣು

ಜನರ ಹೊಟ್ಟೆ ತುಂಬಿಸಲು ಸಾಕಷ್ಟು ಸಂಪನ್ಮೂಲವಿಲ್ಲದ ಕಾರಣ, ನಮೀಬಿಯಾದ ಕಾಡುಗಳಲ್ಲಿರುವ ಪ್ರಾಣಿಗಳನ್ನು ಬೇಟೆಯಾಡುವ ಅಥವಾ ಕೊಲ್ಲುವ ನಿರ್ಧಾರವನ್ನು ಸರ್ಕಾರ